# ಇಂಪನಿ

ವಿರೂಪಾಕ್ಷ ದೇವಾಲಯದ ಕೊಳದ ಮೆಟ್ಟಿಲ ಮೇಲೆ ಕುಳಿತು ಗೈಡ್ ವೀರೇಶ ತನ್ನ ಇಂಪನಿಯಿಂದ ನಾದ ಹೊರಡಿಸುತ್ತಿದ್ದ. ಅಕ್ಟೋಬರ್ ತಿಂಗಳ ಮೊದಲ ವಾರ. ಆಗಷ್ಟೇ ಮಳೆಗಾಲ ಸರಿದಿತ್ತು. ಹಂಪಿ ನೆಲದ ಕೆಸರು ಆರಿತ್ತು. ಸುತ್ತ ಹಸಿರಿತ್ತು. ಏರಲಾರಂಭಿಸಿದ ಬಿಸಿಲಿಗೆ ಆಕಾಶದ ನೀಲಿ ಹೊಳೆಯುತ್ತಿತ್ತು. ಹತ್ತಿಯ ಅರಳೆಯಂತ ಬೆಳ್ಮೋಡದ ಸಣ್ಣಸಣ್ಣ ಗುಡ್ಡೆಗಳು ಅಲ್ಲಲ್ಲಿ ಹರಡಿತ್ತು. ವಾತಾವರಣ ಅವನ ಮನೋಲಾಸ್ಯವನ್ನು ವಿಸ್ತರಿಸುತ್ತಿತ್ತು. ಅದಕ್ಕೆ ಭಂಗ ತರುವಂತೆ ಹಿಂಭಾಗದಲ್ಲಿ ಇದ್ದಕ್ಕಿದ್ದಂತೆ ಗುಂಪು ಗದ್ದಲದ ಧ್ವನಿ. ಒಂದಷ್ಟು ಮಕ್ಕಳು ಹಾಗೂ ಒಂದಿಬ್ಬರು ದೊಡ್ಡವರ ಏರು ಧ್ವನಿ ಕೇಳಿತು. ಅತ್ತ ನೋಡಿದರೆ, 'ಮಂಗ... ಮಂಗ...' ಎಂದು ಕಿರುಚುತ್ತಾ ಕೆಲವು ಹುಡುಗರು ಓಡಿ ಬರುತ್ತಿದ್ದರು. ಅವರ ಹಿಂದಿನಿಂದ ದೊಡ್ಡವರು 'ನಿಧಾನ... ಅದು ಪರಚೀತು' ಅಂತ ಕೂಗಿಕೊಳ್ಳುತ್ತಿದ್ದರು. ಗಡವವೊಂದು ಕ್ಯಾಮೆರಾ ಚೀಲ ಹಿಡಿದು ಅವನು ಕುಳಿತಿರುವ ಕಡೆಯೇ ಬರುತ್ತಿತ್ತು. ವೀರೇಶನಿಗೆ ಪರಿಸ್ಥಿತಿ ಅರ್ಥವಾಯಿತು. ತನ್ನ ಚೀಲದಿಂದ ಬಾಳೆಹಣ್ಣು ತೆಗೆದು ಅದು ಬರುತ್ತಿರುವತ್ತ ಎಸೆದ. ಗಡವ ಕೋತಿ ಚೀಲ ಬಿಟ್ಟು ಬಾಳೆಹಣ್ಣು ಹೆಕ್ಕಿಕೊಂಡು ಮುಂದೆ ಹೋಗಿ ಸಿಪ್ಪೆ ಸುಲಿಯತೊಡಗಿತು. ವೀರೇಶ ಕುಳಿತಲ್ಲಿಂದ ಎದ್ದು ಕ್ಯಾಮೆರಾ ಹೆಕ್ಕಿ ಹುಡುಗರತ್ತ ನಡೆದ. ಮಕ್ಕಳ ಕೊರಳಲ್ಲಿರುವ ಶಾಲೆಯ ಟ್ಯಾಗ್ ನೋಡಿ ಯಾವ ಶಾಲೆಯಿಂದ ಬರ್ತಿದೀರಿ? ಕೇಳಿದ. ಅಷ್ಟರಲ್ಲಿ ಕೊರಳಿಗೆ ಬಿಗಿಲ್ ನೇತಾಡಿಸಿಕೊಂಡಿರುವ ಯುವ ಅಧ್ಯಾಪಕನೊಬ್ಬ ಆ ಮಕ್ಕಳನ್ನು ತಲುಪಿ ನಗುತ್ತ ಕ್ಯಾಮೆರಾ ಬ್ಯಾಗಲ್ಲಿಡಿ ಅಂದವನೆ ವೀರೇಶನಿಗೆ, 'ಥ್ಯಾಂಕ್ಸ್ ಸರ್. ಮಕ್ಳಿಗೆ ಕೋತಿಗಳನ್ನು ಕಂಡಾಗಲೇ ಜಾಗ್ರತೆ ಹೇಳಿದ್ದೆ' ಅಂದ. 'ದೇವಸ್ಥಾನದ ಆವರಣದಲ್ಲಿ ಕೋತಿಗಳು ಸ್ವಲ್ಪ ಜಾಸ್ತಿ.... ಹುಷಾರಾಗಿರಿ' ವೀರೇಶ ಮಾತು ಮುಗಿಸುವ ಮೊದಲೇ ಆ ಮೇಷ್ಟ್ರು, 'ನಮ್ಮ ಆಂಜನೇಯ ಸ್ವಾಮಿ ಹುಟ್ಟದ ನೆಲ ಅಲ್ವಾ. ಇಲ್ಲಿ ಕೋತಿಗಳಿರದೆ ಇನ್ನೆಲ್ಲಿರ್ಬೇಕು' ಎಂದ.

ಅವನ ಧ್ವನಿಯಲ್ಲಿ ಬಹಳ ಹೆಮ್ಮೆ, ಭಕ್ತಿ ತುಂಬಿತ್ತು. ವೀರೇಶ ಏನು ಹೇಳಬೇಕೋ ತಿಳಿಯದೆ ಅದೂ ಸರೀನೆ ಸಾರ್. ಮಕ್ಕಳಿಗೆ ಇಲ್ಲಿ ಸ್ವಲ್ಪ ಎಚ್ಚರಿಕೆಯಿಂದರಲು ಹೇಳಿ ಅನ್ನುತ್ತಾ ಮತ್ತೆ ತನ್ನ ಮೊದಲಿನ ಜಾಗದತ್ತ ಹೋಗಲು ಹೆಜ್ಜೆ ಎತ್ತಿದ.

'ನೀವು ಗೈಡ್ ಅಲ್ವಾ ಸರ್. ನಮ್ಮ ಮಕ್ಕಳಿಗೆ ಒಂದ್ಹತ್ತು ನಿಮಿಷ ದೇವಸ್ಥಾನದಲ್ಲಿರುವ ಶಾಸನಗಳ ಬಗ್ಗೆ ಸ್ವಲ್ಪ ಮಾಹಿತಿ ಕೊಡ್ತೀರಾ?' ಕೇಳಿದ ಆ ಅಧ್ಯಾಪಕ. ಅವರ ಜೊತೆ ಗೈಡ್ ಇಲ್ಲ ಎಂಬುದನ್ನು ಆಗಲೇ ಅವನು ಗಮನಿಸಿದ್ದ. ತನ್ನನ್ನು ಎರಡು ದಿನಗಳಿಗೆ ಟೂರ್ ಗೈಡ್ ಆಗಿ ಬುಕ್ ಮಾಡಿಕೊಂಡ ಅವಿನಾಶ ಬೆಳಗಿನ ಒಂಬತ್ತರ ಸುಮಾರಿಗೆ ತಲುಪುವುದಾಗಿ ಹೇಳಿದ್ದರಿಂದ ವೀರೇಶ ಎಂಟೂವರೆ ಹೊತ್ತಿಗೆ ದೇವಾಲಯದ ಸಮೀಪ ಬಂದಿದ್ದ. ಆದರೆ, ಅವಿನಾಶ ಹತ್ತು ನಿಮಿಷದ ಹಿಂದೆ ಕರೆ ಮಾಡಿ ತಾವು ತಲುಪುವಾಗ ಹನ್ನೊಂದು ಗಂಟೆಯೇ ಆದೀತು ಅಂದಿದ್ದರಿಂದ, ದೇವಾಲಯದ ಕೊಳದ ಬಳಿ ಇಂಪನಿ ನುಡಿಸುತ್ತ ಕುಳಿತಿದ್ದ. ಹೇಗೂ ಫ್ರೀ ಇದ್ದೇನಲ್ಲ. ಮಕ್ಕಳಿಗಾಗಿ ಕೇಳ್ತಿದಾರೆ ಅಂದುಕೊಂಡು ಮಕ್ಕಳನ್ನೊಮ್ಮೆ